ಅಪ್ಪನೂ ಅವರೂ ಗುಸ ಗುಸ ಅಂತ ಮಾತಾಡಿಕೊಂಡಿದ್ರು ಅಷ್ಟೆ. ನೆಂಟರ ಮನೆ ಅಂತ ನಿರ್ಮಲ ಹೋಗಿದ್ದೇ ಇಲ್ಲ. ಮದುವೆಯಾದ ಮೇಲೆ ಮುರುಳಿಯ ನೆಂಟರ ಮನೆಗಳಿಗೆ ಹೋಗಿದ್ದೆಷ್ಟೋ ಅಷ್ಟೆ.

ಮತ್ತೆ ಮರುದಿನ ಸಂಜೆ ಗುರಪ್ಪ ರೈಲ್ವೇ ಸ್ಟೇಷನ್ನಿಗೆ ಹೋಗೋಕೆ ತಯಾರಾದಾಗ ನಿರ್ಮಲ ಮುಂಚೆಯೇ ಹೋಗಿ ಕಾರಲ್ಲಿ ಕೂತಳು. "ನಾನು ಈ ವಿಚಾರವಾಗಿ ನಿನ್ನನ್ನು ಇನ್ಮೇಲಿಂದ ಏನೂ ಕೇಳಲ್ಲ. ನಂಗೆ ಗೊತ್ತು ಒಂದಲ್ಲ ಒಂದು ದಿನ ನೀನೇ ಹೇಳ್ತೀಯ" ಅಂತ. ಅಂದಳು. ಗುರಪ್ಪ "ಹೌದಮ್ಮ, ಇನ್ನೆಷ್ಟ್ ದಿನಾಂತ ಈ ರಹಸ್ಯನ ನನ್ನೊಳಗೇ ಇಟ್ಕೊಂಡಿರ್ಲಿ. ಹೇಳೇ ಹೇಳ್ತೀನಿ. ಆದರೆ ಇವತ್ತಲ್ಲ. ಅದಕ್ಕೊಂದು ಸಮಯ ಬರುತ್ತೆ ಅವತ್ತು ನಿನಗೆ ಖಂಡಿತ ಹೇಳ್ತೀನಿ" ಅಂದರು.

ಯಥಾ ಪ್ರಕಾರ ಅವತ್ತೂ ರೈಲು ಬಂತು, ಹೋಯ್ತು. ಅಪ್ಪ ಮಗಳು ಪೆಚ್ಚು ಮೋರೆ ಹಾಕಿಕೊಂಡು ವಾಪಸ್ ಬಂದರು. ಬರುವಾಗ ನಿರ್ಮಲಳ ಮುಖ ತುಸು ಊದಿತ್ತು. ಗುರಪ್ಪ ನಿಟ್ಟುಸಿರು ಬಿಟ್ಟು ಮಗಳ ಕಡೆ ನೋಡಿದಾಗ ಅವರಿಗೆ ದುಃಖ ಉಕ್ಕಿ ಬಂತು. ಈ ಪರಿಸ್ಥಿತಿ ರಾತ್ರಿ ಮಲಗುವಾಗಲೂ ಇತ್ತು. ಎಂದಿನಂತೆ ಮಾತ್ರೆ ನೀರು ತಂದುಕೊಟ್ಟ ನಿರ್ಮಲ ತಂದೆಯ ತಲೆಯನ್ನು ಒತ್ತಿಕೊಂಡು "ಯಾಕೋ ಮಂಕಾಗಿಬಿಟ್ಟಿಲ್ಲ, ನೀನು ಹೀಗಿದ್ರೆ ನನಗೆ ನೋಡೋಕೆ ಆಗಲ್ಲ. ನೀನೇ ಹೇಳ್ತಾ ಇದ್ದೆ ವಯಸ್ಸಾಗ್ತಾ ಬಂದ ಹಾಗೆ ಎಲ್ಲ ವ್ಯಾಮೋಹನೂ ಬಿಡಬೇಕು ಅಂತ. ನಿನಗೆ ಏನಾದ್ರೂ ನನಗೆ ತಡ್ಕೊಳೋಕೆ ಆಗಲ್ಲ. ನನಗೆ ನಿನ್ನನ್ನು ಬಿಟ್ಟರೆ ಬೇರೆ ಯಾರಿದ್ದಾರೆ ಹೇಳು, ಏನೇ ಆಗ್ಲಿ ನೀನು ಸಂತೋಷವಾಗಿರಬೇಕು" ಅಂತ ಹೇಳಿ ಮಾತ್ರೆನೂ ನೀರನ್ನೂ ಕೊಟ್ಟಳು. ಅದನ್ನು ನುಂಗಿ ಮಗಳ ಕಡೆ ನೋಡಿದಾಗ ಮತ್ತೆ ಗುರಪ್ಪನವರ ಕಣ್ಣಲ್ಲಿ ನೀರಿತ್ತು. "ಹೌದು ಮಗಳೇ, ನೀನು ಹೇಳೋದು ಸರಿ. ಎಲ್ಲ ವ್ಯಾಮೋಹವನ್ನೂ ಬಿಡಬೇಕು. ನಿನ್ನಮ್ಮ ಹೋಗಿ ಎಷ್ಟು ವರ್ಷವಾಯ್ತು ನೋಡು. ನಾನು ಅವಳನ್ನು ನೆನೆಪು ಮಾಡಿಕೊಳ್ಳುವುದು ಎಂದೋ ಒಂದು ದಿನ. ಆದ್ರೆ ಮನುಷ್ಯನಿಗೆ ತನ್ನಲ್ಲಿರುವ ವಸ್ತು ಎಲ್ಲಿ ದೂರ ಹೋಗಿಬಿಡುತ್ತೋ ಎನ್ನುವ ಭಯ ಕಾಡಿದಾಗ ಅವನು ತುಂಬಾ ದುಃಖಪಡ್ತಾನೆ, ನೀನು ಹೋಗಿ ಮಲ್ಕೋ" ಅಂದು ಮಗಳ ತಲೆ ಸವರಿದರು.

ತಂದೆ ಯಾವ ವಿಚಾರಕ್ಕೆ ಹಾಗೆ ಹೇಳಿದರು ಅಂತ ನಿರ್ಮಲಳಿಗೆ ಗೊತ್ತಾಗಲೇ ಇಲ್ಲ. ಇತ್ತ ಗುರಪ್ಪನವರಿಗೂ ನಿದ್ದೆ ಬರಲಿಲ್ಲ. ಕಳಚಿ ಹೋದ ಕೊಂಡಿಗಳನ್ನು ಮತ್ತೆ ಸೇರಿಸಬೇಕು ಅಂತ ಗುರಪ್ಪ ಬಹಳ ಪ್ರಯತ್ನಪಡುತ್ತಿದ್ದಾರೆ. ಬಿಟ್ಟೇ ಹೋಗಬೇಕು ಅನ್ನೋ ವಿಧಿಬರಹ ಇದ್ದರೆ ಸೇರಿಸಬೇಕು ಅನ್ನೋ ನನ್ನ ಹಟ ಎಲ್ಲಿ ಗೆಲ್ಲುತ್ತೆ ಅಂತ ಅನಿಸಿತು. ಆದರೆ ನಿರ್ಮಲಳಿಗೆ ನಿಜ ಹೇಳಬೇಕೇ ಬೇಡವೇ ಅನ್ನೋ ಜಿಜ್ಞಾಸೆ ಮಾತ್ರ ದೂರವಾಗಿರಲಿಲ್ಲ. ಕಣ್ಣು ಮುಚ್ಚಿ ನಿದ್ದೆ ಮಾಡೋಕೆ ಯತ್ನಿಸಿದರೂ ಯಾಕೋ ರೈಲಿನ ಸದ್ದೇ ಕಿವಿ ಮೇಲೆ ಬೀಳುತ್ತಿತ್ತು.

ಸುಮಾರು 25 ವರ್ಷಗಳ ಹಿಂದಕ್ಕೆ ಮನಸ್ಸು ಓಡಿತು. ಗುರಪ್ಪನವರು ದಿನಾಲೂ ಶಾಲೆ ಮುಗಿಸಿಕೊಂಡು ಮನೆಗೆ ಬಂದು ಕಾಫಿ ಕುಡಿದು ಸ್ವಲ್ಪ ಹೊತ್ತು ಕೂತಿದ್ದು ವಾಕಿಂಗ್ ಅಂತ ರೈಲ್ವೇ ಸ್ಟೇಷನ್ ತನಕ ಹೋಗಿ ಬರೋದು ಅವರ ಅಭ್ಯಾಸ. ಹೆಚ್ಚೂ ಕಡಿಮೆ ದಿನಾ ಈ ಕಾರ್ಯಕ್ರಮ ಇದ್ದೇ ಇರುತ್ತೆ. ಸಾಮಾನ್ಯವಾಗಿ ದಿನಾಗಲೂ ಒಬ್ಬರೇ ಹೋಗುತ್ತಾರೆ. ಒಂದೊಂದು ದಿನ ಅವರ ಹೆಂಡತಿ ಪಾರ್ವತಿ ನಾನೂ ಬರ್ತೀನಿ ಅಂತ ಜೊತೇಲಿ ಬಂದು ವಾಪಸ್ ಬರುವಾಗ ದೇವಸ್ಥಾನಕ್ಕೆ ಹೋಗಿ ಅಲ್ಲಿಂದ ಮನೆಗೆ ಬರುವಾಗ ಏನಾದರೂ ತರಕಾರಿ ತಗೊಂಡು ಬರ್ತಿದ್ದರು. ಅವತ್ತೂ ಹೆಂಡತಿ ಪಾರ್ವತಿಯೂ ಅವರ ಜೊತೆ ಬಂದರು. ಅವತ್ತೂ